ಗೋಡೆಗಳೆತ್ತರಕ್ಕೂ ಬೆಳೆದವು. ಉದ್ದಗಲಕ್ಕೂ ಹರಡಿ ನಿಂತು ಕಟ್ಟಡ ಕಟ್ಟಿದವೇ ವಿನಃ ಪ್ರಶ್ನೆಗಳಾಗಿ ಹೊರಬರಲೇ ಇಲ್ಲ. ಹೊರಬಂದಾಕ್ಷಣಕ್ಕೆ ಕಟ್ಟಿಕೊಂಡ ಹೊರಾಂಗಣದ ಭದ್ರ ಕೋಟೆಯಿದು. ಎಲ್ಲಿ ಕಳಚಿ ಬೀಳುತ್ತದೆಯೋ ಎನ್ನುವ ಭಯದಲ್ಲಿಯೇ ಬದುಕತೊಡಗಿದಳು. ಹಾಸಿಗೆಗೇ ಅಂಟಿದ ಮುದುಕಿ ಬದುಕಿರುವವರೆಗೂ "ಥೂ ಬರಡು ಮುಂಡೆ. ನಿನ್ನಿಂದ ನಮ್ಮ ವಂಶ ನಿಂತು ಹೋಯಿತು" ಎಂದು ಮೂದಲಿಸುತ್ತಿತ್ತು. ಆಗೆಲ್ಲ ಆಕೆ ತನ್ನ ಮತ್ತು ಮಣಿವೇಲುವಿನ ಸಂಬಂಧದ ಬಗ್ಗೆ ಹೇಳಬೇಕೆನ್ನಿಸುತ್ತಿತ್ತು. ತನ್ನ ಮಾತುಗಳನ್ನು ಅವನ ಮುದಿತಾಯಿ ನಂಬಬಹುದು ಎನ್ನುವ ನಂಬಿಕೆಯೂ ಇರಲಿಲ್ಲ. ಮುದುಕಿಯ ಮಾತು ನಿಂತ ನಂತರ ಮೌನದ ಮಹಲೊಂದನ್ನು ತಾನೇ ಕಟ್ಟಿಕೊಂಡಳು. ಹಚ್ಚಿಕೊಂಡ ಮೌನವೇ ಸುಖ ಎನ್ನಿಸಿತ್ತು. ಅವನ ಮಾತು ನಗು ಯಾವುದೂ ತನಗೆ ಸಂಬಂಧಿಸಿದ್ದಲ್ಲ ಎನ್ನಿಸತೊಡಗಿತು. ಅದೂ ಅಲ್ಲದೆ ದಿನವೂ ಮನೆಗೆ ಹಾಲು ಹಾಕುವ ಹೆಂಗಸು, "ನಿನ್ ಗಂಡಂಗೆ ಯಾವ ಹೆಂಗಸು ಮೈಮೇಲೆ ಬಿದ್ರೂ ಏನೂ ಅನ್ಸಾಕಿಲ್ಲ ಅಲ್ವಾ" ಎನ್ನುತ್ತ ಕಿಸಕ್ಕನೆ ನಕ್ಕ ಮೇಲಂತೂ ತಾನು ಯಾವುದೋ ಅನಾಮಿಕನೊಡನೆ ಬದುಕುತ್ತಿದ್ದೇನೆ ಎಂಬ ಭಾವ ವಿಪರೀತವಾಗಿತ್ತು. ಅವನು ತನಗೆ ಅನ್ನ ನೀಡುವ ಧಣಿ ಎಂತಲೂ ತಾನು ಈ ಮನೆಯ ಕೆಲಸದಾಳು ಎಂತಲೂ ಅನ್ನಿಸತೊಡಗಿತ್ತು. ಹೀಗಾಗಿಯೇ ಅವನಿಂದ ದೂರ ಉಳಿಯುವ ಸಾಧ್ಯತೆಗಳ ಬಗ್ಗೆಯಾಗಲಿ, ಸಂದರ್ಭಗಳ ಬಗ್ಗೆಯಾಗಲಿ ಆಕೆ ಎಂದಿಗೂ ಯೋಚಿಸುವ ಗೋಜಿಗೇ ಹೋಗಲಿಲ್ಲ. ಅಪ್ಪನ ಮನೆಯ ಸೋರುವ ಮಾಡು, ಅಮ್ಮನ ಹರಕು ಲಂಗ, ತಮ್ಮನ ತೇಪೆ ಚಡ್ಡಿ, ಗಂಡನ ಮನೆಯಿಂದ ಹೊರದಬ್ಬಿಸಿಕೊಂಡು ಬಂದ ಅಕ್ಕ, ಕಿತ್ತುಹೋದ ಸಡಿಲ ಎಲಾಸ್ಟಿಕ್ಕಿಗೊಂದು ಪಿನ್ನು ಹಾಕಿ ಅಕ್ಕ ಧರಿಸಿದ ತನ್ನದೇ ಹಳೆಯ ಬ್ರಾ ಅವಳನ್ನು ಕಟ್ಟಿ ನಿಲ್ಲಿಸಿತ್ತು. ತಿಂದು ಉಡುವುದಕ್ಕೇನು ಕೊರತೆ ಇಲ್ಲ. ಕಾರು ಬಂಗಲೆ ನೋಡಿದವರು ಹೊಟ್ಟೆ ಉರಿದುಕೊಳ್ಳಲು ಬೇಕಿರುವ ಎಲ್ಲ ಸವಲತ್ತುಗಳೂ ಇರುವಾಗ ನಾಲ್ಕು ದಿನ ಎಲ್ಲಿದ್ದರೇನು, ಹೇಗಿದ್ದರೇನು ಬದುಕಿ ಸತ್ತರಾಯಿತು ಎನ್ನುವ ನಿರ್ಲಿಪ್ತತೆ ಇಪ್ಪತ್ತೈದರಲ್ಲಿ ಹುಟ್ಟಿ ನಲವತ್ತೈದರವರೆಗೆ ಬೆಳೆದು ಕೂತಿತ್ತು.

ಮಣಿವೇಲು ದಣಿದೇ ಬಂದಿದ್ದ. ಅವ ಹಾಗೆ ಬಂದನೆಂದರೆ ಸೀದಾ ನಿದ್ದೆಗೆ ಜಾರುತ್ತಾನೆಂದೇ ಅರ್ಥ. "ಹನುಮಕ್ಕ ಮತ್ತವಳ ಮಗಳು ಬಂದಿದ್ದರು" ಅರುಂಧತಿ ಯಾವ ಮುನ್ಸೂಚನೆಯೂ ಇಲ್ಲದೆ ಹೇಳಿದಳು. ಅವ ತಕ್ಷಣವೇ ಬಿಸಿ ಕಾಫೀ ಮೈ ಮೇಲೆ ಉಗ್ಗಿಸಿಕೊಂಡವನಂತೆ, "ಯಾಕಂತೆ? ಇಲ್ಲಿಗೆಲ್ಲ ಬರಬೇಡಿ ಅಂತ ಹೇಳಿ ಕಳಿಸು. ಅಂತಹವರನ್ನೆಲ್ಲ ಎಂಟರ್‌ಟೈನ್ ಮಾಡಬೇಡ ಅಂತ ಎಷ್ಟು ಸರ್ತಿ ಹೇಳಿಲ್ಲ?" ಗರಂ ಆಗಿಯೇ ನುಡಿದ. ಅರುಂಧತಿಗೆ ಪಿಚ್ಚೆನ್ನಿಸಿತು. ಹನುಮಕ್ಕ ಕೊಟ್ಟ ಹಣ ತಂದು ಕೈಗಿಟ್ಟಳು. "ಇಷ್ಟೆ ಕೊಟ್ಟಿದ್ದಾ?" ಎಂದ. ಅರುಂಧತಿ ಮಾತಾಡಲಿಲ್ಲ. ಬದಲಾಗಿ, "ಕಂಪ್ಲೈಂಟ್ ಕೊಟ್ಟ ಮೇಲೂ ಪೊಲೀಸರು ಏನೂ ಕ್ರಮ ಕೈಗೊಂಡೇ ಇಲ್ಲವಂತೆ" ಅಂದಳು. "ಕಳ್ಳಿ ಮಗಳು... ಅಲ್ಲದೆ ಇವಳೇ ರಾತ್ರಿ ಅವನ ಜೊತೆ ಹೋಗಿರೋದು... ಹೆಂಗೆ ಅರೆಸ್ಟ್ ಮಾಡ್ತಾರೆ. ಅಲ್ಲದೇ ಇವರ ಕಸುಬೇ ಅಂತದ್ದು" ಎಂದು ಏನೇನು ಆಸಕ್ತಿ ಇಲ್ಲದವನಂತೆ ನುಡಿದ. ಅರುಂಧತಿಗೆ ಅವನ ವರ್ತನೆ ರೇಜಿಗೆ ಅನ್ನಿಸಿತು. "ಕಂಡಕಂಡವರ ಬಳಿಯೆಲ್ಲ ಹನುಮಕ್ಕನಷ್ಟು ಪ್ರಾಮ್ಟ್ ಹೆಂಗಸನ್ನ ನಾನು ಕಂಡೇ ಇಲ್ಲ. ಕೇಸು ಮುಗಿಸಿದ ತಕ್ಷಣ ಎಲ್ಲೇ ಇದ್ರೂ ಫೀಸು ಕಳಿಸ್ತಾಳೆ" ಎನ್ನುವ ಮಣಿ ಇವನೇಯಾ ಅನ್ನಿಸಿ ಅವನನ್ನೇ ದಿಟ್ಟಿಸಿದಳು."ಹಾಗಲ್ಲ, ಅರೆಸ್ಟ್ ಮಾಡೋದೆಲ್ಲ ಏನೂ ಬೇಡವಂತೆ, ಆ ಹುಡುಗ ಮದ್ವೆ ಮಾಡಿಕೊಂಡ್ರೆ ಸಾಕಂತೆ" ಹೇಳಬೇಕಿದ್ದ ಎಲ್ಲವನ್ನೂ ಅರುಂಧತಿ ಪಟಪಟನೆ ಹೇಳಿಬಿಟ್ಟಳು. ಅವ ನಗತೊಡಗಿದ. ಅಂತೆಯೇ ತನ್ನೆದರು ನಿಂತು ಇಷ್ಟೊಂದು ಗಟ್ಟಿಯಾಗಿ ಮಾತಾಡಿದ ಅರುಂಧತಿಯನ್ನೊಮ್ಮೆ ಕಿರುಗಣ್ಣಿನಲಿ ನೋಡಿದ. "ಅವ ಇವಳನ್ನ ಮದ್ವೆ ಮಾಡ್ಕೋತಾನಾ ಮತ್ತೇನು. ಅವನಿಗಿವಳು ಎಷ್ಟನೆಯವಳೋ, ಅವನ ಅಪ್ಪನಿಗೆ ಒಳ್ಳೆ ಹೆಸರಿದೆ, ದುಡ್ಡಿದೆ. ಅಲ್ಲದೇ ಜಿಲ್ಲಾ ಮಂತ್ರಿ